ಜಿಲ್ಲೆಯ ಹೆಸರು		ರಸ್ತೆಗಳು ಮತ್ತು ಸೇತುವೆಗಳು	ಕಟ್ಟಡಗಳು
8.	ಚಿತ್ರದುರ್ಗ	336.89	91.88
9.	ಹಾಸನ	103.00	91.58
10.	ಚಿಕ್ಕಮಗಳೂರು	102.32	47.80
11.	ದಕ್ಷಿಣ ಕನ್ನಡ	364.04	164.38
12.	ಕೊಡಗು	91.44	41.06
13.	ಧಾರವಾಡ	302.65	158.56
14.	ಕಾರವಾರ	158.53	30.02
15.	ಬೆಳಗಾಂ	375.23	76.73
16.	ಬಿಜಾಪುರ	268.94	94.77
17.	ಗುಲಬರ್ಗಾ	158.50	124.84
18.	ಬೀದರ್	117.96	36.15
19.	ಬಳ್ಳಾರಿ	223.73	57.00
29.	ರಾಯಚೂರು	222.00	52.24
	ಒಟ್ಟು	4381.62	2587.23

ವಿಷಯ:- ಗದಗ್‌ನಲ್ಲಿ ನಿರ್ಮಾಣಗೊಳ್ಳುತ್ತಿರುವ ಪ್ರಾಚ್ಯವಸ್ತು ಹಾಗೂ ಸಂಗ್ರಹಾಲಯ ಕಟ್ಟಡ.

141(392)

ಶ್ರೀ ಡಿ.ಆರ್. ಪಾಟೀಲ್ (ಗದಗ್):- ಮಾನ್ಯ ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:-

ಅ) ಗದಗನಲ್ಲಿ ನಿರ್ಮಾಣಗೊಳ್ಳುತ್ತಿರುವ ಪ್ರಾಚ್ಯವಸ್ತು ಹಾಗೂ ಸಂಗ್ರಹಾಲಯ ಕಟ್ಟಡದ ನೆಲ ಅಂತಸ್ತು ನಿರ್ಮಾಣ ಪೂರ್ಣಗೊಂಡಿದ್ದು, ಕಟ್ಟಡದ 2 ಹಾಗೂ 3ನೇ ಅಂತಸ್ತಿನ ಕೆಲಸ ಕೈಗೊಳ್ಳಲು ಸರ್ಕಾರವು ಕ್ರಮಕೈಗೊಂಡಿದೆಯೇ;

ಆ) ಕಟ್ಟಡದ ಯೋಜನೆ ರೂಪಿಸಿದಾಗ ಒಂದು ಹಾಗೂ ಎರಡನೇ ಅಂತಸ್ತಿನ ನೀಲನಕ್ಷೆ ಅಂದಾಜು ಪತ್ರಿಕೆ ತಯಾರಿಸಿದ್ದು, ಅದನ್ನು ಪೂರ್ಣಗೊಳಿಸಲು ಸರ್ಕಾರವು ಕಾಲ ಮಿತಿಗೊಳಪಟ್ಟು ಕಾರ್ಯಕ್ರಮ ಹಮ್ಮಿಕೊಳ್ಳುವುದೇ?

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು):-

ಅ) ಗದಗದಲ್ಲಿ ನಿರ್ಮಾಣಗೊಳ್ಳುತ್ತಿರುವ ಪ್ರಾಚ್ಯವಸ್ತು ಹಾಗೂ ಸಂಗ್ರಹಾಲಯ ಕಟ್ಟಡದ ನೆಲ ಅಂತಸ್ತು ನಿರ್ಮಾಣ ಪೂರ್ಣಗೊಂಡಿದ್ದು, ಇಷ್ಟರಲ್ಲೇ ಸಂಗ್ರಹಾಲಯವು ಉದ್ಘಾಟನೆಗೊಳ್ಳಲಿದೆ. ಕಟ್ಟಡದ 2 ಹಾಗೂ 3ನೇ ಅಂತಸ್ತಿನ ಕೆಲಸ ಕೈಗೊಳ್ಳಲು ಪ್ರಸಕ್ತ ಸಾಲಿನಲ್ಲಿ ಸಾಕಷ್ಟು ಅನುದಾನದ ಕೊರೆತೆಯಿಂದ ಕೆಲಸ ಕೈಗೆತ್ತಿಕೊಳ್ಳಲಾಗಲಿಲ್ಲ ಮುಂದಿನ ಆರ್ಥಿಕ ಸಾಲಿನಲ್ಲಿ ಹಣ ಒದಗಿಸಿಕೊಂಡು ಕಾರ್ಯವನ್ನು ಕೈಗೊಳ್ಳಲಾಗುವುದು.

ಆ) ಕಟ್ಟಡದ ಯೋಜನೆ ರೂಪಿಸುವಾಗ ಒಂದು ಹಾಗೂ ಎರಡನೇ ಅಂತಸ್ತಿನ ನೀಲಿನಕ್ಷೆ ಹಾಗೂ ಅಂದಾಜು ಪತ್ರಿಕೆಗಳನ್ನು ತಯಾರಿಸಿದ್ದು ಸೂಕ್ತ ಅನುದಾನ ಒದಗಿಸಿಕೊಂಡು ಯೋಜನೆಯನ್ನು ಪೂರ್ಣಗೊಳಿಸಲು ಅನುದಾನದ ಮಿತಿಗೊಳಪಟ್ಟ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುವುದು.

ವಿಷಯ:- ಗದಗ್ ಪಟ್ಟಣದ ಪ್ರವಾಸಿ ಕೇಂದ್ರಗಳು.

142(392 (ಎ))

ಶ್ರೀ ಆರ್. ಪಾಟೀಲ್ (ಗದಗ್):- ಮಾನ್ಯ ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:-

ಅ) ಗದಗ್ ಪಟ್ಟಣ ಪ್ರವಾಸಿ ಆಕರ್ಷಣೆ ಕೇಂದ್ರಗಳಾದ ಲಕ್ಕುಂಡಿ, ಡಂಬಳ, ಮುಳಗುಂಡ, ಮೊದಲಾದವುಗಳಿಂದ ಸುತ್ತುವರೆದಿದ್ದು, ಇಲ್ಲಿ ಪ್ರಾಣಿ ಸಂಗ್ರಹಾಲಯವು ಇದೆ. ಇದಕ್ಕಾಗಿ ಪ್ರವಾಸೋದ್ಯಮ ಇಲಾಖೆ ಪ್ರವಾಸಿಗಳ ಅನುಕೂಲಕ್ಕೆ ಸೌಲಭ್ಯಗಳನ್ನು ಸೃಷ್ಠಿಸಲು ಹಾಗೂ ಇಲಾಖೆ ಕಛೇರಿ ಹೊಂದಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು):-

ಆ) ಹೌದು. ಪ್ರವಾಸೋದ್ಯಮ ಇಲಾಖೆಯು ಒಂದು ಪ್ರವಾಸಿ ಮಾಹಿತಿ ಕೇಂದ್ರವನ್ನು ಗದಗ್‌ನಲ್ಲಿ ತೆರೆದಿದೆ.

ವಿಷಯ:- ಗದಗ್‌ನಲ್ಲಿ ವಾರ್ತಾ ಹಾಗೂ ಪ್ರಚಾರ ಇಲಾಖೆಯ ಸಹಾಯಕ ನಿರ್ದೇಶಕರ ಕಛೇರಿಯ ಪ್ರಾರಂಭ.

143(393)

ಶ್ರೀ ಡಿ.ಆರ್. ಪಾಟೀಲ್ (ಗದಗ್):- ಮಾನ್ಯ ಕಾನೂನು ವಾರ್ತಾ ಮತ್ತು ಪ್ರಚಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:-